# ಭಾರತದ ಚಾಂಪಿಯನ್ ಪಟ್ಟ ಉಳಿದೀತೇ?

...27ನೇ ಪುಟದಿಂದ

ಮೈದಾನದಲ್ಲಿ ‘ಕುದುರೆ’ಗಳು ಓಡಿದಾಗಲೇ ವಿಜೇತರು ಯಾರು ಎನ್ನುವುದು ನಿರ್ಧಾರ ಆಗುವುದು.

## ದುರ್ಬಲ ಬೌಲಿಂಗ್

ಭಾರತದ ವೇಗದ ಬೌಲಿಂಗ್ ವಿಭಾಗ ಉಳಿದ ಬಲಾಢ್ಯ ತಂಡಗಳಿಗೆ ಹೋಲಿಸಿದರೆ ಅತ್ಯಂತ ದುರ್ಬಲವಾಗಿದೆ. ಗ್ಲೆನ್ ಮೆಕ್‌ಗ್ರಾ, ಅಲನ್ ಡೊನಾಲ್ಡ್ ಇಲ್ಲವೆ ಕರ್ಟ್ನಿ ವಾಲ್ಷ್ ತರಹದ ಒಬ್ಬ ಬೌಲರ್ ಕೂಡ ನಮ್ಮ ತಂಡದಲ್ಲಿಲ್ಲ. ಹಾಗೆ ನೋಡಿದರೆ ಇದು ಭಾರತದ ಪಾರಂಪರಿಕ ಸಮಸ್ಯೆ. ಕಪಿಲ್ ದೇವ್ ಹಾಗೂ ಜಾವಗಲ್ ಶ್ರೀನಾಥ್ ಅವರಂತಹ ಕೆಲವೇ ಬೌಲರ್‌ಗಳನ್ನು ನಾವು ಹೆಸರಿಸಬಹುದಾದರೂ, ಜಗತ್ತಿನ ಶ್ರೇಷ್ಠ ವೇಗಿಗಳ ಮಟ್ಟವನ್ನು ಅವರೂ ಮುಟ್ಟಿರಲಿಲ್ಲ ಎನ್ನುವುದು ಒಪ್ಪಿಕೊಳ್ಳಬೇಕಾದ ಸತ್ಯ. ಬ್ಯಾಟ್ಸ್‌ಮನ್‌ಗಳು ಎಷ್ಟೇ ದೊಡ್ಡ ಮೊತ್ತ ಪೇರಿಸಿದರೂ ಅದನ್ನು ರಕ್ಷಿಸಿಕೊಳ್ಳುವ ಬೌಲಿಂಗ್ ಬಲವೂ ಬೇಕಲ್ಲ?

ಬಹುಕಾಲದಿಂದ ಭಾರತ ಉಪಖಂಡದ ಪ್ರಮುಖ ಅಸ್ತ್ರವಾಗಿದ್ದುದು ಸ್ಪಿನ್. ಆಸ್ಟ್ರೇಲಿಯಾ ಸೇರಿದಂತೆ ಬಹುತೇಕ ರಾಷ್ಟ್ರಗಳು ಬರುಬರುತ್ತಾ ಆ ‘ಬ್ರಹ್ಮಾಸ್ತ್ರ’ದ ಮೇಲೆ ಹಿಡಿತ ಸಾಧಿಸಿಬಿಟ್ಟವು. ಭಾರತ ನೆಲದಲ್ಲೇ ಅಲ್ಲಿನ ಆಟಗಾರರು ತರಬೇತಿ ಪಡೆದು ಹೋದರು. ಸ್ಪಿನ್ ಕಲಿಸಿದ ದೇಶಕ್ಕೆ ತಿರುಮಂತ್ರ ಹಾಕಲು ಆರಂಭಿಸಿದರು. ಇತರ ತಂಡಗಳು ಸ್ಪಿನ್ ಕಲೆಯನ್ನು ಹೇಗೆ ಕರಗತ ಮಾಡಿಕೊಂಡವೋ ಹಾಗೆ ಭಾರತ ತಂಡ ಎದುರಾಳಿಗಳಿಗೆ ಸಿದ್ಧಿಸಿರುವ ವೇಗದ ಬೌಲಿಂಗ್ ಕೌಶಲವನ್ನು ಕಲಿಯಬೇಕಿತ್ತು. ಆದರೆ, ಆ ಕೆಲಸವನ್ನು ಮಾಡಲಿಲ್ಲ.

ಮುಂದಿನ ವಿಶ್ವಕಪ್ ಆಸ್ಟ್ರೇಲಿಯಾದಲ್ಲಿ ನಡೆಯಲಿದೆ ಎಂಬುದು ನಾಲ್ಕು ವರ್ಷಗಳ ಮುಂಚೆಯೇ ಗೊತ್ತಿತ್ತು. ಅಲ್ಲಿನ ಪಿಚ್‌ಗಳಿಗೆ ಅಗತ್ಯವಾದ ವೇಗದ ಅಸ್ತ್ರಗಳನ್ನು ರೂಪಿಸಬೇಕು ಎನ್ನುವುದು ಸ್ವಹಿತಾಸಕ್ತಿಗೆ ಹೋರಾಟ ನಡೆಸಿದ್ದ ಬಿಸಿಸಿಐ ಆಡಳಿತಗಾರರಿಗೂ ಹೊಳೆಯಲಿಲ್ಲ. ಆಗಿನ ಲೋಪದ ಬಿಸಿ ಈಗ ದೋನಿ ಪಡೆಗೆ ತಟ್ಟುತ್ತಿದೆ. ದೊಡ್ಡ ಮೊತ್ತವನ್ನು ಪೇರಿಸಿದರೂ ಅದನ್ನು ಉಳಿಸಿಕೊಳ್ಳುವ ದಾರಿ ಯಾವುದು ಎನ್ನುವ ಚಿಂತೆ ಕೋಚ್ ಹಾಗೂ ನಾಯಕ ಇಬ್ಬರನ್ನೂ ಕಾಡುತ್ತಿದೆ.

ಗಾಯಾಳು ಇಷಾಂತ್ ಶರ್ಮಾ ಟೂರ್ನಿ ವೇಳೆಗೆ ಪೂರ್ಣವಾಗಿ ಚೇತರಿಸಿಕೊಳ್ಳಲಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ, ಡಿಸೆಂಬರ್‌ನಿಂದ ಇದುವರೆಗೆ ಅವರು ಒಂದೇ ಒಂದು ಪಂದ್ಯವನ್ನೂ ಆಡಿಲ್ಲ. ಒಂದೊಂದು ಪಂದ್ಯವೂ ಮಹತ್ವವಾಗಿರುವ ಈ ಹಂತದಲ್ಲಿ ಅವರು ಲಯ ಕಂಡುಕೊಳ್ಳುವುದು ಕಷ್ಟ. ಭುವನೇಶ್ವರ ಕುಮಾರ್ ಹಾಗೂ ಉಮೇಶ್ ಯಾದವ್ ವಿಕೆಟ್ ಗಳಿಕೆಗೆ ತಿಣುಕಾಟ ನಡೆಸಿದ್ದಲ್ಲದೆ ರನ್‌ಗಳ ವಿಷಯದಲ್ಲೂ ದುಂದುವೆಚ್ಚಕ್ಕೆ ಹೆಸರಾಗಿದ್ದಾರೆ. ಕಳೆದ ವಿಶ್ವಕಪ್‌ನಲ್ಲಿ ಆಡಿದ ನಾಲ್ವರು ಮಾತ್ರ ಈ ತಂಡದಲ್ಲಿದ್ದು, ಉಳಿದವರೆಲ್ಲ ಹೊಸಬರಾಗಿದ್ದಾರೆ. ಸ್ವತಃ ನಾಯಕ ದೋನಿ ಅವರಲ್ಲದೆ ವಿರಾಟ್ ಕೊಹ್ಲಿ, ಸುರೇಶ್ ರೈನಾ, ರವೀಂದ್ರ ಜಡೇಜಾ ಹಾಗೂ ರೋಹಿತ್ ಶರ್ಮಾ ಅವರ ಮೇಲೆ ತಂಡದ ನಿರೀಕ್ಷೆಯ ಭಾರ ಬಿದ್ದಿದೆ. ಆಲ್‌ರೌಂಡರ್ ಕೋಟಾದಲ್ಲಿ ಸ್ಥಾನ ಪಡೆದಿರುವ ಕರ್ನಾಟಕದ ಸ್ಟುವರ್ಟ್ ಬಿನ್ನಿ ಕೂಡ ಆಸೆ ಚಿಗುರಿಸಿದ್ದಾರೆ. ಅಬ್ಬರದ ಆಟಕ್ಕೆ ಹೆಸರಾಗಿರುವ ಕೊಹ್ಲಿ, ವಿಶ್ವಕಪ್ ಟೂರ್ನಿಗೆ ಮುಂಚೆ ನಡೆದ ತ್ರಿಕೋನ ಸರಣಿಯಲ್ಲಿ ಗಳಿಸಿದ ರನ್‌ಗಳು 9, 4, 3* ಹಾಗೂ 8! ಆಸ್ಟ್ರೇಲಿಯಾದ ಸನ್ನಿವೇಶಕ್ಕೆ ಈಗ ತಕ್ಕಮಟ್ಟಿಗೆ ಹೊಂದಿಕೊಂಡಿರುವ ಕೊಹ್ಲಿ ಅವರ ಬ್ಯಾಟು ಮಾತನಾಡಬೇಕಿದೆ. ಏಕೆಂದರೆ, ಯಶಸ್ಸಿಗೆ ದೋನಿ ಬಳಗ ಬಹುವಾಗಿ ಬ್ಯಾಟಿಂಗ್ ಬಲವನ್ನೇ ನೆಚ್ಚಿಕೊಂಡಿದೆ.

ಸಮತೋಲಿತ ಹಾಗೂ ಬಲಿಷ್ಠ ಎಂದೆಲ್ಲ ಬಣ್ಣಿಸಿಕೊಂಡ ತಂಡ ಎಡವಿದ, ಕಡೆಗಣನೆಗೆ ಒಳಗಾದ ತಂಡ ಕ್ರಿಕೆಟ್ ಕ್ಷಿತಿಜದಲ್ಲಿ ನವತಾರೆಯಾಗಿ ಹೊಳೆದ ಉದಾಹರಣೆಗಳು ಇತಿಹಾಸದ ಪುಟ, ಪುಟದಲ್ಲೂ ಸಿಗುತ್ತವೆ. 1983ರ ಜೂನ್ 25ರಂದು ಕಪಿಲ್ ಪಡೆ, ಲಾರ್ಡ್ಸ್‌ನ ಬಾಲ್ಕನಿಯಲ್ಲಿ ವಿಶ್ವಕಪ್ ಎತ್ತಿ ಹಿಡಿಯಲಿದೆ ಎಂದು ಯಾರುತಾನೆ ಭವಿಷ್ಯ ನುಡಿದಿದ್ದರು? ಕ್ರಿಕೆಟ್‌ನ ಸೊಬಗು ಇರುವುದೇ ಅದರ ಅಚ್ಚರಿದಾಯಕ ಫಲಿತಾಂಶದಲ್ಲಿ. ಯಾರಿಗೆ ಗೊತ್ತು, ದುರ್ಬಲ ಬೌಲಿಂಗ್, ಅಸ್ಥಿರ ಬ್ಯಾಟಿಂಗ್ ಪ್ರದರ್ಶನದ ನಡುವೆಯೂ ಮುಕ್ಕೋಟಿ ದೇವತೆಗಳು ತಂಡದ ಕೈಹಿಡಿದರೆ ಭಾರತವೇ ಮತ್ತೆ ಗೆದ್ದೀತು, ವಿಶ್ವವಿಜೇತ ಆದೀತು!




ಇಶಾಂತ್ ಶರ್ಮಾ

**ಭಾರತದ ಇದುವರೆಗಿನ ಸಾಧನೆ**

| | |
|---|---|
| 1975 | ಗುಂಪು ಹಂತದಲ್ಲೇ ನಿರ್ಗಮನ |
| 1979 | ಗುಂಪು ಹಂತದಲ್ಲೇ ನಿರ್ಗಮನ |
| 1983 | ವಿಜೇತರು |
| 1987 | ಸೆಮಿಫೈನಲ್‌ನಲ್ಲಿ ನಿರ್ಗಮನ |
| 1992 | ಗುಂಪು ಹಂತದಲ್ಲೇ ನಿರ್ಗಮನ |
| 1996 | ಸೆಮಿ ಫೈನಲ್‌ನಲ್ಲಿ ನಿರ್ಗಮನ |
| 1999 | ಸೂಪರ್ ಸಿಕ್ಸ್‌ನಲ್ಲಿ ನಿರ್ಗಮನ |
| 2003 | ಫೈನಲ್‌ನಲ್ಲಿ ಸೋಲು |
| 2007 | ಗುಂಪು ಹಂತದಲ್ಲೇ ನಿರ್ಗಮನ |
| 2011 | ವಿಜೇತರು |